

ಎಲ್ಲರೆದುರೂ ತನ್ನ ಹೆಂಡತಿಯನ್ನು ಆತ ನಿಂದಿಸಿದ್ದ. ಅಷ್ಟೆ ಏಕೆ? ತನ್ನ ಜಮೀನಿನ ವಿವಾದವನ್ನು ಅವನ ನೆರವಿನಿಂದ ಗೆದ್ದಿದ್ದ. ಆದ್ದರಿಂದ ಅಲ್ಲಿದ್ದ ಹಿರಿಯರು ಸೌದೆಯ ವಿಷಯದ ಬಗ್ಗೆ ಹೇಳಿದ್ದನ್ನು ಅರ್ಥ ಮಾಡಿಕೊಳ್ಳಬಲ್ಲವನಾಗಿದ್ದ.

'ಆಲ್‌ರೈಟ್' ಎಂದು ಇಂಗ್ಲೀಷಿನಲ್ಲಿ ನುಡಿದು ಮಾತೃಭಾಷೆಗೆ ಮರಳಿ, 'ಸಣ್ಣ ವಿಷಯಗಳಿಗೆ ಜಗಳಬೇಡ' ಎಂದ. ಮೇಲೆ ನಿಂತು ತನ್ನ ಉಡುಪನ್ನು ಸರಿಪಡಿಸಿಕೊಂಡು ಮತ್ತೊಮ್ಮೆ ಬ್ಯಾಗ್‌ನೊಳಗೆ ಕೈಹಾಕಿ ಹೊರತೆಗೆದು ಪೂಜಾರಿ ಭಕ್ತರಿಗೆ ಪ್ರಸಾದ ವಿತರಿಸುವಂತೆ ಮತ್ತೊಂದು ಶಿಲ್ಲಿಂಗ್ ಅನ್ನು ಕೈಯಲ್ಲಿರಿಸದೆ ನೆಲದ ಮೇಲೆ ಹಾಕಿದ. ಕುಳಿತಿದ್ದ ಮಂದಿ ಅದನ್ನು ಮುಟ್ಟದೆ ತಲೆಯಾಡಿಸಿದರು. ರೂಫ್ ಮತ್ತೊಮ್ಮೆ ಮೇಲೆದ್ದು ಮತ್ತೊಂದು ಶಿಲ್ಲಿಂಗ್ ಅನ್ನು ನೀಡುತ್ತಾ ನುಡಿದ, 'ನಾನಿಷ್ಟೆ ಕೊಡೋದು. ನಮ್ಮ ಶತ್ರುಗಳಿಗೆ ವೋಟು ನೀಡುವುದಾದರೆ ನೀಡಿ'. ಇನ್ನೂ ವಾದ ಮುಗಿಸುವವನಂತೆ ನುಡಿದ ಅಲ್ಲಿದ್ದವರಿಗೂ ತಾವು ಸಭ್ಯತೆಯ ಗೆರೆ ದಾಟದೆ ಎಷ್ಟು ಮುಂದುವರಿಯಬಹುದೆಂದು ತಿಳಿದಿತ್ತು. ಅವರು ಹಣವನ್ನು ಎತ್ತಿಕೊಂಡು ಅವನನ್ನು ಸಮಾಧಾನಿಸಿದರು.

ರೂಫ್ ಶತ್ರುವೆಂದು ಹೇಳಿದ್ದು ಬುಡಕಟ್ಟು ಜನಾಂಗದವರ ಉದ್ಧಾರವೇ ತಮ್ಮ ಧ್ಯೇಯವೆಂದು ಘೋಷಿಸಿ ಸ್ಥಾಪಿಸಲ್ಪಟ್ಟ ಪ್ರೊಗೇಸಿವ್ ಆರ್ಗನೇಷನ್ ಪಾರ್ಟಿ(POP) ಕುರಿತು. ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸರ್ವನಾಶದಿಂದ ಪಾರಾಗಲು ಹುಟ್ಟಿಕೊಂಡ ಪಕ್ಷವೆಂದು ಅದರ